

(6ನೇ ಪುಟದಿಂದ)

ಈ ನೊರೆಯೊಳಗೆ ಮರಿಹುಳುವು ಮುಸುಕು ಹಾಕಿಕೊಂಡಂತೆ ಇರುತ್ತದೆ. ಮರಿಹುಳುಗಳು ನಾಚಿಕೆ ಸ್ವಭಾವದಿಂದಾಗಿ ಹೊರಗೆ ಕಾಣಲು ಬಯಸುವುದಿಲ್ಲ. ಕಡ್ಡಿ ಆಡಿಸಿ ಇವನ್ನು ಹೊರ ತೆಗೆಯಲೆತ್ನಿಸಿದರೆ ಮತ್ತೆ ನೊರೆಯಲ್ಲಿ ಅವಿತು ಕುಳಿತುಕೊಳ್ಳಲು ಪ್ರಯತ್ನಿಸುತ್ತವೆ. ಈ ಬುರುಗು ಇವುಗಳ ರಕ್ಷಣಾ ಕವಚ.

ಈ ಮರಿಹುಳುಗಳಿಗೆ ಅವು ನೊರೆ ಬಿಡುವುದರಿಂದ ಕನ್ನಡದಲ್ಲಿ 'ಉಗುಳು ಹುಳು' ಎಂದು ಕರೆದರು. ಆಂಗ್ಲ ಭಾಷೆಯಲ್ಲಿ ಸ್ಪಿಟ್ಲ್ ಬಗ್, ಕುಕ್ಕು ಸ್ಪಿಟ್ಲ್, ಫ್ರಾಗ್ ಸ್ಪಿಟ್ಲ್ ಎಂತೆಲ್ಲಾ ಕರೆಯುತ್ತಾರೆ. ಇದು 5.3 ರಿಂದ 6.9 ಮಿಲಿ ಮೀಟರ್‌ನಷ್ಟು ಚಿಕ್ಕ ಗಾತ್ರದಲ್ಲಿರುತ್ತದೆ. ನೊರೆಯಲ್ಲೆ ಮರಿಹುಳು ಹಂತಗಳಲ್ಲಿ ಬೆಳವಣಿಗೆಯಾಗುವುದರಿಂದ ಪರಭಕ್ಷ ಶತೃಕೀಟಗಳಿಂದ ರಕ್ಷಣೆ ಪಡೆದರೆ ದೇಹವು ಒಣಗದ ಹಾಗೆ ಬಿಸಿಲಿನ ತಾಪವನ್ನು ತಡೆದುಕೊಳ್ಳುತ್ತದೆ. ಈ ಮರಿಹುಳುಗಳು ನಾಲ್ಕು ಮರಿಹಂತಗಳನ್ನು ಪೂರ್ಣಗೊಳಿಸಿ ಪ್ರೌಢಾವಸ್ಥೆಗೆ ತಲುಪುತ್ತವೆ.

ಪ್ರೌಢಾವಸ್ಥೆಗೆ ತಲುಪಿದಾಗ ಇದು ಕಪ್ಪೆಯಂತೆ ಕಾಣುತ್ತದೆ. ಈ ಕಾರಣಕ್ಕೆ ಇವಕ್ಕೆ ಕಪ್ಪೆ ಜಿಗಿಹುಳು ಅಥವಾ ಕಪ್ಪೆ ಮಿಡತೆ ಎಂಬ ಹೆಸರು ಬಂದಿದೆ. ಪಾರದರ್ಶಕವಲ್ಲದ ರೆಕ್ಕೆಗಳು, ಮೂರು ಜೊತೆ ಕಾಲುಗಳು ಹಾಗೂ ಕಪ್ಪೆಯಂತಿರುವ ಮೂತಿ ಬಾಯಿಯನ್ನು ಹೊಂದಿದೆ. ಇದು ಸಹ ಸಸ್ಯಗಳ ರಸ ಹೀರಿ ಆಹಾರ ಸೇವನೆ ಮಾಡುತ್ತದೆ. ಆದರೆ ಬುರಗು (ನೊರೆ) ಸ್ರವಿಸುವುದಿಲ್ಲ. ಇವಕ್ಕೆ ತೊಂದರೆಯಾದಾಗ ತಮ್ಮ ಶಕ್ತಿಯುತ ಹಿಂಗಾಲನ್ನು ಬಳಸಿಕೊಂಡು ಸುಮಾರು 70 ಸೆಂ.ಮೀ. ನಷ್ಟು ಲಂಬವಾಗಿ ರಾಕೆಟ್ ವೇಗದಲ್ಲಿ ಸಸ್ಯದಿಂದ ಸಸ್ಯಕ್ಕೆ ಜಿಗಿಯುತ್ತವೆ.

ಇತ್ತೀಚಿನ ಒಂದು ಸಂಶೋಧನೆಯ ಪ್ರಕಾರ, ಇದು ಒಂದು ಮಿಲಿ ಸೆಕೆಂಡನಲ್ಲಿ 14 ಕಿ.ಮೀ. ವೇಗದಲ್ಲಿ ಜಿಗಿದು ಹಾರಿರುವುದು ಕಂಡು ಬಂದಿದೆ. ಇಂತಹ ವೇಗದ ಹಾರಾಟಗಾರ ವಯಸ್ಕ ಕೀಟವನ್ನು ಕೆಲವು ಪರಭಕ್ಷಕಗಳು ಮಾತ್ರ ಬೇಟೆಯಾಡಿ ತಿನ್ನಬಲ್ಲವು.

ಮರಿಹುಳುಗಳಿಂದ ವಯಸ್ಕ ಜಿಗಿಹುಳುವಾಗಿ ಜೀವಿಸುವ ಜೀವನ ಚಕ್ರ 30ರಿಂದ 50 ದಿನಗಳದ್ದಾಗಿದೆ. ಕಪ್ಪೆ ಜಿಗಿಹುಳುವನ್ನು ಆಂಗ್ಲ ಭಾಷೆಯಲ್ಲಿ ಫ್ರಾಗ್ ಹಾಪರ್ ಎಂದು ಕರೆದು ಕೀಟ ವರ್ಗದ ರಸ ಹೀರುವ ಹೆಮಿಪ್ಟೆರ್ ಗುಂಪಿನ ಸರ್ಕೋಪಿಡೆ ಕುಟುಂಬಕ್ಕೆ ಸೇರಿಸಲಾಗಿದೆ.

ಇವು ರೈತರ ಬೆಳೆಗಳನ್ನು ಹಾಳು ಮಾಡುವ ಕೀಟಗಳು. ಇವುಗಳ ನಿಯಂತ್ರಣವೂ ಬಲು ಸುಲಭ. ನೊರೆ ಇರುವ ಜಾಗೆಗೆ ಪೈಪ್ ಮೂಲಕ ನೀರು ಬಿಟ್ಟು, (ಪೈಪಿನ ತುದಿಗೆ ಬೆರಳನ್ನು ಹಿಡಿದು ನೀರು ರಭಸವಾಗಿ ಬಿಟ್ಟರೆ) ನೊರೆ ಕಿತ್ತು ಹೋಗುವಂತೆ ಮಾಡಿದರೆ ಮರಿಹುಳುಗಳು ನಾಶವಾಗುತ್ತವೆ. ಈ ಉಗುಳು ನೊರೆಯು ವಿಷಕಾರಕವಲ್ಲ. ಕೈಗಳಿಂದ ಹಿಡಿದು ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ನಾಶ ಪಡಿಸಬಹುದು.

